# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್

■ ಮೂಲ: **ದಿನಕರ್ ಜೋಶಿ**
■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**
ಕಲೆ: ಮನೋಹರ ಆಚಾರ್ಯ



## ಮತ್ತೆ ಬಾಪೂ

ಮೊದಲ ದಿನವೇ ಗುಲಾಬ ಬಾಪೂ ಅವರ ಚರಣಾರವಿಂದಗಳಲ್ಲಿ ತಲೆಯಿಟ್ಟು ನಮಸ್ಕರಿಸಿದಾಗ ಬಾಪೂ, ಸೀರೆಯ ಅಂಚಿನಿಂದ ಮುಖವನ್ನು ಮುಚ್ಚಿಕೊಂಡಿದ್ದ ಅವಳ ತಲೆಯ ಮೇಲೆ ಮೆಲ್ಲನೆ ಕೈಯಿಟ್ಟು ಕಂಪಿಸುವ ಸ್ವರದಲ್ಲಿ ಹೇಳಿದ್ದರು

'ಚಂಚಿ! ನಾನು ಈ ಮನೆಗೆ ನಿನ್ನನ್ನು ಸೊಸೆಯಾಗಿ ಸ್ವಾಗತಿಸುತ್ತಿಲ್ಲ, ಮಗಳಾಗಿ ಸ್ವಾಗತಿಸುತ್ತಿದ್ದೇನೆ, ಇದನ್ನು ಮರೆಯಬೇಡ.'

ಗುಲಾಬಳ ಕಣ್ಣುಗಳು ತುಂಬಿ ಬಂದಿದ್ದವು. ತವರು ಮನೆಯಲ್ಲಿ ಎಲ್ಲರೂ ಅವಳನ್ನು 'ಚಂಚಿ' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಅತ್ತೆ ಮನೆಯಲ್ಲಿ ಇದುವರೆಗೆ ಎಲ್ಲರೂ ಅವಳನ್ನು ಗುಲಾಬ ಹೆಸರಿನಿಂದ ಕರೆಯುತ್ತಿದ್ದರು. ತಾನು ಅತ್ತೆ ಮನೆಗಾದರೂ ಎಲ್ಲಿ ಬಂದಿದ್ದೇನೆ ಎಂದು ಅವಳಿಗೆ ಅನ್ನಿಸಿತು. ತಾನು ರಾಜಕೋಟದ ಆ ಬಂಗ್ಲೆ ಯಂತಿದ್ದ ಮನೆಯ ಬಳಿಯಿರುವ ಬೇವಿನ ದಟ್ಟ ಕೊಂಬೆಗಳ ನೆರಳಿನಲ್ಲಿ ನಿಂತಿದ್ದೇನೆ. ಬೇವಿನ ಕಂಪು ಗಾಳಿಯಲ್ಲಿ ಕಲೆತಂತಿದೆ. ಗುಲಾಬ ದೀರ್ಘವಾಗಿ ಉಸಿರಾಡಿದಳು.

'ನೀನು ತವರಿನಿಂದ ಹೊರಗೆ ಬಂದಿದ್ದೀಯ ಎಂದು ಎಂದೂ ತಿಳಿಯಬೇಡ. ಚಂಚಿ, ನೀನು ಹೆಣ್ಣು ಮಗಳು, ಮಗುವಾಗಿ ಈ ಮನೆಯಲ್ಲಿಲ್ಲ, ಬದಲಾಗಿ ನೀನು ಎಲ್ಲರಿಗಿಂತ ಹಿರಿಯಳು.'

ತಾನು ಬೇರೆ ಎಂಬ ಭಾವನೆಯಿದ್ದ ಗುಲಾಬಳ ಮನಸ್ಸು ಆ ಕ್ಷಣದಿಂದಲೇ ಹಗುರವಾಯಿತು. ತುಂಟ ದೇವದಾಸನ ತುಂಟಾಟಗಳು, ತಿಳಿವಳಿಕೆಯಿಲ್ಲದ ವಯಸ್ಸಿನಲ್ಲಿದ್ದ ರಾಮದಾಸನ ರಂಪಾಟಗಳು, ಮನಸ್ಸಿನಲ್ಲೇ ಗಾಬರಿಪಡುವ ಮಣಿಲಾಲ... ಇವರೆಲ್ಲರೂ ಗುಲಾಬಳ ಹಾದಿಯನ್ನು ಕಾಯುತ್ತಿರುವಂತಿತ್ತು. ಆದರೆ ಗುಲಾಬ ಎಲ್ಲವನ್ನೂ ಸಹಜವಾಗಿಯೇ ಸ್ವೀಕರಿಸಿದಳು.

ಸೂರ್ಯ ನೆತ್ತಿಯ ಮೇಲೆ ಬಂದ ನಂತರ ಸ್ವಲ್ಪ ಹೊತ್ತು ಅಲ್ಲಿಯೇ ನಿಂತ. ಆಗ ಆಶ್ರಮವಾಸಿಗಳ ದೃಷ್ಟಿ ಫೀನಿಕ್ಸ್ ಆಶ್ರಮದ ಇಳಿಜಾರಿನಿಂದ ಸ್ಟೇಷನ್‌ಗೆ ಹೋಗುವ ಕಾಲುದಾರಿಯಲ್ಲಿ ಸ್ಥಿರವಾಯಿತು. ಮಕ್ಕಳು ಊಟವನ್ನು ಮುಗಿಸಿದ್ದರು, ಆದರೆ ದೊಡ್ಡವರು ಇನ್ನೂ ಊಟ ಮಾಡಲು ಕೂತಿರಲಿಲ್ಲ. ಬಾಪೂ ಅವರನ್ನು ಕರೆತರಲು ಸ್ಟೇಷನ್‌ಗೆ ಇಬ್ಬರು ಕಾರ್ಯಕರ್ತರು ಹೋಗಿದ್ದರು. ಆಗಸ ಮೋಡಗಳಿಂದ ಆವರಿಸಿತ್ತು. ಒಮ್ಮೆ ಬಿಸಿಲು ಮೂಡಿದರೆ, ಒಮ್ಮೆ ಮೋಡ ಕವಿದ ಸಂಜೆಯಂತೆ ಭಾಸವಾಗುತ್ತಿತ್ತು. ಎಲ್ಲರ ಮನಸ್ಸಿನಲ್ಲಿ ಬೇಸರ ಮನೆ ಮಾಡಿತ್ತು.

'ಅವರು ಬಂದರು...ಅವರು ಬಂದರು...'

ಎತ್ತರದ ಮರವೊಂದರ ಕೊಂಬೆಯಲ್ಲಿ ಕೂತಿದ್ದ ದೇವದಾಸ ಕೂಗಿ ಹೇಳಿದ. 'ಬಾಪೂ ಬಂದರು...ಬಾಪೂ ಬಂದರು...' ಎಲ್ಲರೂ ಸುಮಾರಾಗಿ ಓಡಿದರು.

'ಅಲ್ಲ ಅಲ್ಲ, ಬಾಪೂ ಅಲ್ಲ...' ಕಾಲು ಹಾದಿಯನ್ನು ನೋಡುತ್ತಾ ದೇವದಾಸ ಹೇಳಿದ, 'ಯಾರೋ ಬೇರೆಯವರು, ಇನ್ನೊಬ್ಬರೊಂದಿಗೆ ಬರುತ್ತಿದ್ದಾರೆ.'

ಅನೇಕ ಯುವಕರು ಮರವನ್ನೇರಿದರು. ಕೆಲವರು ಇಳಿಜಾರಿನಲ್ಲಿ ಓಡಿ ಹೋಗಿ ಕಾಲುದಾರಿಗೆ ಹೋದರು. ಹರಿಲಾಲ ವ್ಯಾಕುಲಗೊಂಡ. ಬಾಪೂ ಬರುತ್ತಿಲ್ಲ, ಹಾಗಾದರೆ ಯಾರಿರಬಹುದು? ಅವನು ಬಾ ಅವರನ್ನು ನೋಡಿದ. ಬಾ ಅವರ ಕಣ್ಣುಗಳಲ್ಲಿಯೂ ಕಳವಳವಿತ್ತು. ಸ್ವಲ್ಪವೇ ಹೊತ್ತಿಗೆ ಎಲ್ಲರ ಉತ್ಸುಕತೆ ತಣಿಯಿತು. ಆಶ್ರಮಕ್ಕೆ ಬರುತ್ತಿದ್ದ ಆ ಅಪರಿಚಿತ ವ್ಯಕ್ತಿ, ಬಾಪೂ ಅವರೊಂದಿಗೆ ಹೋರಾಟದಲ್ಲಿ ಭಾಗವಹಿಸುತ್ತಿದ್ದ ದಕ್ಷಿಣ ಭಾರತದ ಯುವಕ ನಾಯಡೂ ಆಗಿದ್ದ. ಹಿರಿಯ ಆಶ್ರಮವಾಸಿಗಳಿಗೆ ಅವನ ಪರಿಚಯವಿತ್ತು. ನಾಯಡೂ ಬಂದು ಬಾ ಅವರನ್ನು ನೋಡಿದ, ನಂತರ ಕಲೆತಿದ್ದ ಗುಂಪಿನೆದುರು ನಿಂತು ಹೇಳಿದ

'ಸರ್ಕಾರ ಬಾಪೂ ಅವರನ್ನು ಬಂಧಿಸಿದೆ. ಬಾಪೂ ಜೈಲಿನಲ್ಲಿದ್ದಾರೆ.'